ನ್ಯಾಯಮೂರ್ತಿ ಕುಲದೀಪ್‌ಸಿಂಗ್ ಆಯೋಗದ ಬಗ್ಗೆ

34 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಮೂರ್ತಿ ಕುಲದೀಪ್‌ಸಿಂಗ್ ಆಯೋಗದ ವರದಿಯನ್ನು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಯಾವಾಗ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು

ಆ) ಸರ್ಕಾರಿ ಪರಿಶೀಲನೆಯಲ್ಲಿದೆ.

ಶ್ರೀ **ಜಿ. ರಾಜುಗೌಡ:** ಮಾನ್ಯ ಅಧ್ಯಕ್ಷರೇ, ಈ ಹಂತದಲ್ಲಿ ನ್ಯಾಯಮೂರ್ತಿ ಕುಲದೀಪ್‌ಸಿಂಗ್ ಆಯೋಗದ ವರದಿಯನ್ನು ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ನನಗನ್ನಿಸುತ್ತದೆ. ಏಕೆಂದರೆ ನೈತಿಕ ಹೊಣೆ ಹೊತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಆ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಆದು ಕೇಂದ್ರ ಸರ್ಕಾರದಲ್ಲಿ ಅಂಗೀಕಾರ ಆಗಿದೆ. ಕೇಂದ್ರ ಸರ್ಕಾರ, ಭೂ ಹಗರಣದ ವಿಷಯ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಿದ್ದು ಅವರೇ ಕ್ರಮ ತೆಗೆದುಕೊಳ್ಳಲಿ ಎಂದು ಹೇಳಿರುವಾಗ ಮತ್ತೆ ಈ ಹಂತದಲ್ಲಿ ಪರಿಶೀಲನೆ ಮಾಡುತ್ತೇವೆ ಎನ್ನತಕ್ಕದ್ದು ಸಮಯೋಚಿತವೇ? ದಯಮಾಡಿ ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಇಲ್ಲಿ ಉತ್ತರ ಕೊಟ್ಟಿರುವುದನ್ನು ಬಿಟ್ಟರೆ ಬೇರೆ ಏನೂ ಹೆಚ್ಚಿಗೆ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ ಅದರಲ್ಲಿ ವಿಷಯಗಳು ಏನೇನು ಅಡಕವಾಗಿ ಅವುಗಳನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕು. Both legally and factually and those things are under the scrutiny of the Government.

ಶ್ರೀ ಜಿ. ರಾಜುಗೌಡ: ಕಾಲ ವಿಳಂಬ ಮಾಡುವುದರಿಂದ ನ್ಯಾಯಮೂರ್ತಿಯವರು ಏನು ತೀರ್ಪು ಕೊಟ್ಟಿದ್ದಾರೆ, ಆ ತೀರ್ಪಿಗೆ ಪರೋಕ್ಷವಾಗಿ ಅವಹೇಳನ ಮಾಡಿದ ಹಾಗೆ ಆಗುವುದಿಲ್ಲವೇ? ತಾವು ಮತ್ತೆ ಪರೋಕ್ಷವಾಗಿ ಆಪಾದಿತನಿಗೆ ಬೆಂಬಲ ಕೊಟ್ಟ ಹಾಗೆ ಆಗುವುದಿಲ್ಲವೇ? ದಯಮಾಡಿ ತಿಳಿಸಿ.

ಶ್ರೀ ಎಸ್. ಬಂಗಾರಪ್ಪ: ಇದರಲ್ಲಿ ಬೆಂಬಲದ ಪ್ರಶ್ನೆ ಬರುವುದಿಲ್ಲ. ಅವರು ಏನು ಹೇಳಿದ್ದಾರೆ. Whatever decision you take ಆಕ್ಷನ್ ಏನು ತೆಗೆದುಕೊಳ್ಳಬೇಕು, that will have to stand the scrutiny of the Court of law.

ಅದನ್ನು ವಿಚಾರ ಮಾಡಿಕೊಂಡು ನಾವು ಮಾಡಬೇಕಾಗಿದೆ. ಅದಕ್ಕಾಗಿ ಕಾನೂನು ಪ್ರಕಾರ ಸರಿಯಾಗಿ ಇರಬೇಕಾಗುತ್ತದೆ. That is under examination.

ಕುಂದಾಪುರದಲ್ಲಿ ಕರಾವಳಿ ರಸ್ತೆಗೆ ಡಾಂಬರು ಹಾಕುವುದು

660 – ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ತೆಕ್ಕಟ್ಟೆ ಕರಾವಳಿ ರಸ್ತೆಯಿಂದ ಕುಂದಾಪುರ ಕೋಡಿ ತನಕ ಕರಾವಳಿ ರಸ್ತೆಗೆ ತಾರು ಹಾಕುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಯಾವಾಗ ತಾರು ಹಾಕಿಲಾಗುತ್ತದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಈ ಗ್ರಾಮೀಣ ಮಟ್ಟದ ರಸ್ತೆಗೆ ಡಾಂಬರು ಹಾಕುವ ಪ್ರಸ್ತಾಪವು ಮಂಗಳೂರು ಜಿಲ್ಲಾ ಪರಿಷತ್ತಿನ ಮುಂದಿದೆ.

ಆ) ಈ ರಸ್ತೆಯ ಒಟ್ಟು 11.17 ಕಿ.ಮೀ. ಉದ್ದದಲ್ಲಿ ಈವರೆಗೆ 2.17 ಕಿ.ಮೀ. ಉದ್ದಕ್ಕೆ ಡಾಂಬರು ಹಾಗಲಾಗಿದೆ. ಉಳಿದ ಉದ್ದಕ್ಕೆ ಅನುದಾನ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಡಾಂಬರನ್ನು ಹಾಕಲಾಗುವುದು.

ಶ್ರೀ ರಮಾನಾಥ ರೈ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು 'ಅ' ಪ್ರಶ್ನೆಗೆ "ಈ ಗ್ರಾಮೀಣ ಮಟ್ಟದ ರಸ್ತೆಗೆ ಡಾಂಬರು ಹಾಕುವ ಪ್ರಸ್ತಾಪವು ಮಂಗಳೂರು ಜಿಲ್ಲಾಪರಿಷತ್ತಿನ ಮುಂದಿದೆ" ಎಂದು ಹೇಳಿದ್ದಾರೆ. ಮತ್ತೊಂದು ಪ್ರಶ್ನೆಗೆ ಉತ್ತರಿಸುತ್ತಾ, "ಈ ರಸ್ತೆಯ ಒಟ್ಟು 11.17 ಕಿ.ಮೀ. ಉದ್ದದಲ್ಲಿ ಈವರೆಗೆ 2.17 ಕಿ.ಮೀ. ಉದ್ದಕ್ಕೆ ಡಾಂಬರು ಹಾಕಲಾಗಿದೆ. ಉಳಿದ ಉದ್ದಕ್ಕೆ ಅನುದಾನ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಡಾಂಬರನ್ನು ಹಾಕಲಾಗುವುದು" ಎಂದು ಹೇಳುದ್ದಾರೆ. ಈ ರಸ್ತೆಯು ಕುಂದಾಪುರ ತಾಲ್ಲೂಕಿನ ಮೀನುಗಾರಿಕಾ ಪ್ರದೇಶಕ್ಕೆ ಹೋಗತಕ್ಕಂಥ ಕಾವಳಿ ಪ್ರದೇಶದ ಪ್ರಮುಖ ರಸ್ತೆಯಾಗಿದೆ. ಇದಕ್ಕೆ ಮೀನುಗಾರಿಕಾ ಇಲಾಖೆಯಿಂದ ವಿಶೇಷ ಅನುದಾನವನ್ನು ಒದಗಿಸಿಯಾದರೂ ಡಾಂಬರೀಕರಣ ಮಾಡುವುದಕ್ಕೆ ಸೂಕ್ತ ಕ್ರಮವನ್ನು ಸರಕಾರದವರು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಈ ರಸ್ತೆಯಲ್ಲಿ ಉದ್ದ 11.17 ಕಿ.ಮೀ. ಇದೆ. ಅದರಲ್ಲಿ ಈಗಾಗಲೇ 2.17 ಕಿ.ಮೀ. ಉದ್ದದಷ್ಟಕ್ಕೆ ಡಾಂಬರು ಹಾಕಲಾಗಿದೆ. ಇನ್ನು ಉಳಿದಿರತಕ್ಕಂಥ ಭಾಗಕ್ಕೆ ಡಾಂಬರ್ ಹಾಕಿಸಲು ಹಣಕಾಸನ್ನು ಒದಗಿಸಿಕೊಡುತ್ತೇವೆ. ಎಲ್ಲವನ್ನೂ ಒಂದೇ ಸಾರಿ ಮಾಡಿಮುಗಿಸಿಕೊಡುತ್ತೇವೆ ಎಂದು ನಾನು ಹೇಳಲಾರೆ. ಈ ವರ್ಷವೂ ಕೂಡ ಸ್ವಲ್ಪ ಹಣ ಪ್ರೊವೈಡ್ ಮಾಡೋಣ, ಆ ಕೆಲಸವನ್ನು ತೆಗೆದುಕೊಂಡು ಮುಂದುವರಿಸೋಣ ಎಂದು ಹೇಳಬಯಸುತ್ತೇನೆ.

ಹಿಪ್ಪರಗಿ ಅಣೆಕಟ್ಟು ಯೋಜನೆ ಬಗ್ಗೆ

261 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಹಿಪ್ಪರಗಿ ಆಣೆಕಟ್ಟು ಕೆಲಸವು ಸ್ಥಗಿತಗೊಂಡಿರುವುದಕ್ಕೆ ಕಾರಣವೇನು?

ಆ) ಈ ವರ್ಷ ಹಿಪ್ಪರಿಗೆ ಆಣೆಕಟ್ಟಿಗೆ 20 ಕೋಟಿ ರೂ.ಗಳ ಹಣಕಾಸಿನ ವ್ಯವಸ್ಥೆ ಒದಗಿಸಲಾಗಿದ್ದರೂ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಇ) ಪ್ರತಿ ವರ್ಷ ಸಿಬ್ಬಂದಿವರ್ಗಕ್ಕೆ ವಿಚ್ಚಾಗುತ್ತಿರುವ ಹಣದ ಮೊತ್ತವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಈ ಯೋಜನೆಯ ಅಂದಾಜು ಪಟ್ಟಿಗೆ ಇನ್ನೂ ಮಂಜೂರಾತಿ ಇಲ್ಲದೆ ಇರುವುದರಿಂದ ಮತ್ತು ತಳಪಾಯದಲ್ಲಿ (ಫೌಂಡೇಶನ್) ತೊಂದರೆಗಳು ಉದ್ಭವಿಸಿದ್ದರಿಂದ ಯೋಜನೆಯ ಕೆಲಸವು ಸ್ಥಗಿತಗೊಂಡಿದೆ.

ಆ) ಈ ಯೋಜನೆಗಾಗಿ ಪ್ರಸಕ್ತ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನದ ಮೊತ್ತ ಒಂದು ಕೋಟಿ ರೂ.ಗಳು ಮಾತ್ರ. ಯೋಜನೆಯ ಪ್ರಗತಿಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಮುಖ್ಯ ಕಾರಣಗಳನ್ನು (ಅ) ಪ್ರಶ್ನೆಯ ಉತ್ತರದಲ್ಲಿ ವಿವರಿಸಲಾಗಿದೆ.